**O. S. No:113/2020**
**DW:4**

(ಇಂದು ದಿನಾಂಕಃ **08-12-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ಎಂ ಆರ್ ವಕೀಲರಿಂದ**

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| **ನಿ.ಡಿ 11** | ಪಹಣಿ ಪತ್ರಿಕೆ. |
| **ನಿ.ಪಿ 12** | ಖರೀದಿ ಪತ್ರ. |
| **ನಿ.ಪಿ 13 ರಿಂದ 15** | ಹಕ್ಕು ಬದಲಾವಣೆಗಳು. |

**ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿರುವ ಪ್ರಮಾಣ ಪತ್ರದ ಅಂಶಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಜಮೀನು ಸರ್ವೇ ನಂಃ 306/3 ಕ್ಷೇತ್ರ 2 ಎಕರೆ ಜಮೀನನ್ನು ಖರೀದಿ ಮಾಡುವ ವೇಳೆ ವಾದಿಯ ಸಹಿಯನ್ನು ಖರೀದಿ ಪತ್ರಕ್ಕೆ ಪಡೆದುಕೊಂಡಿರುವುದಿಲ್ಲ. ಸದರಿ ಖರೀದಿಯ ಬಗ್ಗೆ ವಾದಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ಸದರಿ ಜಮೀನು ಈಗ ವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ವಾದಿಯ ಹಿಸ್ಸಾಕ್ಕೆ ಬಂಧನಕಾರಿಯಾಗಿವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**